(ಇ) ಹಾಗಿದ್ದಲ್ಲಿ, ಈ ನಗರವನ್ನು 'ಬಿ' ಸಿಟಿ ಶ್ರೇಣಿಗೆ ಸೇರಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ ? (ಮಾಹಿತಿ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಹೌದು.

(ಆ) ಹೌದು.

(ಇ) 2011ರ ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸಿನಂತೆ 2001ರ ಜನಗಣತಿ ಆಧಾರದ ಮೇಲೆ ಕಲಬುರಗಿ ನಗರವನ್ನು 'ಸಿ' ವರ್ಗದ ನಗರವೆಂದು ವರ್ಗೀಕರಿಸಲಾಗಿದ್ದು, 'ಬಿ' ನಗರವೆಂದು ಮರು ವರ್ಗೀಕರಿಸುವ ಬಗ್ಗೆ ಮುಂದೆ ರಚಿತವಾಗುವ ವೇತನ ಆಯೋಗ/ಅಧಿಕಾರಿ ವೇತನ ಸಮಿತಿಯ ಪರಿಶೀಲನೆಗೆ ಮಂಡಿಸಲಾಗುವುದು.

ಬಾಕಿ ಇರುವ ಪ್ರಕರಣಗಳು

1144 (487) **ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ) :–** ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ರಾಜ್ಯದ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳ ಶೀಘ್ರ ವಿಲೇವಾರಿ ಇಲ್ಲವೇ ಇತ್ಯರ್ಥಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆಯೇ ;

(ಈ) 3 ವರ್ಷಕ್ಕೂ ಮೇಲ್ಪಟ್ಟು ಇರುವ ವ್ಯಾಜ್ಯಗಳ ಸಂಖ್ಯೆ ಎಷ್ಟು ? (ನ್ಯಾಯಾಲಯವಾರು ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಸಚಿವರು) :–

(ಅ) ಹೌದು.

(ಆ) ಅಧೀನ ನ್ಯಾಯಾಲಯಗಳಲ್ಲಿ ಐದು ವರ್ಷಕ್ಕಿಂತ ಹಳೆಯ ಪ್ರಕರಣಗಳನ್ನು, ಅಂಗವಿಕಲರಿಗೆ ಸಂಬಂಧಿಸಿದ ಪ್ರಕರಣಗಳನ್ನು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಂದರೆ SC/ST (POA ACT, 1989) ಅಡಿಯಲ್ಲಿನ ಪ್ರಕರಣಗಳನ್ನು, ಮೋಟಾರು ವಾಹನ ಅಪಘಾತ ಪರಿಹಾರದ ಪ್ರಕರಣಗಳನ್ನು, ಲಂಚ ನಿರೋಧಕ ಕಾಯ್ದೆಯಡಿಯಲ್ಲಿನ ಪ್ರಕರಣಗಳನ್ನು, ಹೆಚ್.ಐ.ವಿ. ಪೀಡಿತರ

ಪ್ರಕರಣಗಳನ್ನು , 65 ವರ್ಷಗಳ ವಯೋಮಿತಿ ಮೀರಿದ ಕಕ್ಷಿದಾರರ ಪ್ರಕರಣಗಳನ್ನು ಹಾಗೂ NDPS ಪ್ರಕರಣಗಳನ್ನು ಆದ್ಯತೆಯ ಮೇರೆಗೆ ವಿಲೇಗೊಳಿಸಲು ಕ್ರಮಕೈಗೊಳ್ಳುವಂತೆ ರಾಜ್ಯದ ಎಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ಮಾನ್ಯ ಉಚ್ಚ ನ್ಯಾಯಾಲಯವು ಸೂಚನೆಗಳನ್ನು ನೀಡಿರುತ್ತದೆ.

(ಇ) ಹೌದು.

1. ರಾಜ್ಯದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ/ಅತ್ಯಾಚಾರ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಈಗಾಗಲೇ 10 ವಿಶೇಷ ನ್ಯಾಯಾಲಯಗಳನ್ನು ಸರ್ಕಾರವು ಸ್ಥಾಪಿಸಿದೆ.
2. ಹೊಸದಾಗಿ 125 ಅಧೀನ ನ್ಯಾಯಾಲಯಗಳನ್ನು ಸ್ಥಾಪಿಸಲು ಈಗಾಗಲೇ ಸರ್ಕಾರದ ಮಂಜೂರಾತಿ ನೀಡಿದೆ.
3. ಮುಂಬರುವ 5 ವರ್ಷಗಳಲ್ಲಿ ಒಟ್ಟು 205 ನ್ಯಾಯಾಲಯಗಳನ್ನು ಹೊಸದಾಗಿ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಈ) ದಿನಾಂಕ : 01.11.2014 ರಂದು ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಒಟ್ಟು 2,44,443 ಪ್ರಕರಣಗಳು ಬಾಕಿ ಇರುತ್ತವೆ.

ಸ್ಯಾಂಕಿ ಕೆರೆ ಒತ್ತುವರಿ

1147 (2076) ಡಾ॥ ಅಶ್ವತ್ಥ್‌ನಾರಾಯಣ ಸಿ.ಎನ್. :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

(ಅ) ಬೆಂಗಳೂರು ನಗರದ ಸ್ಯಾಂಕಿ ಕೆರೆಯ ವಿಸ್ತೀರ್ಣವೆಷ್ಟು ; ಈಗಿರುವ ಕೆರೆಯ ವಿಸ್ತೀರ್ಣವೆಷ್ಟು ; ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ ;

(ಆ) ಯಾವ ಸಂಸ್ಥೆಗಳು/ವ್ಯಕ್ತಿಗಳು ಒತ್ತುವರಿ ಮಾಡಿದ್ದಾರೆ ; (ವಿವರ ನೀಡುವುದು)

(ಇ) ಒತ್ತುವರಿ ತೆರವಿಗೆ ಇಲಾಖೆ ಇದುವರೆವಿಗೂ ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡುವುದು)

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತಿಗಳು) :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಲ್ಲೇಶ್ವರಂ ವಿಧಾನ ಕ್ಷೇತ್ರದ ವಾರ್ಡ್ ನಂ: 35 ರಲ್ಲಿ ಇರುವ ಸ್ಯಾಂಕಿ ಕೆರೆಯ ವಿಸ್ತೀರ್ಣ ಕಾವೇರಿ ಬೇಸಿನ್ ಅರ್ಕಾವತಿ ಸೀರೀಸ್ ದಾಖಲೆ ಪುಸ್ತಕದ ಪ್ರಕಾರ 55–00 ಎಕರೆ ಇರುತ್ತದೆ ಹಾಗೂ ಪ್ರಸ್ತುತ ಸ್ಯಾಂಕಿ ಕೆರೆ 40 ಎಕರೆ 24 ಗುಂಟೆ